ಓ ಎಸ್ ನಂಃ 24/2015

ಪಿ.ಡಬ್ಲ್ಯೂ ಃ 1

ದಿನಾಂಕ 08-07-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 8ನೇ ಪ್ರತಿವಾದಿ ಪರಃ ಶ್ರೀ ಬಿಎಸ್‌ಕೆ ವಕೀಲರಿಂದಃ

ನನ್ನ ತಂದೆಯ ಹೆಸರು ಕೃಷ್ಣಪ್ಪ. ಅವರು ಸರಸ್ವತಿ ಪುರದಲ್ಲಿ ವಾಸ ಇದ್ದಾರೆ. ದಾವಾ ಆಸಿತ ಪೈಕಿ ಎರಡು ಜಮೀನುಗಳಿಗೆ ಮದಗದಕೆರೆಯಿಂದ ನೀರು ಬರುತ್ತದೆ. ಉಳಿದ ಜಮೀನುಗಳು ಖುಷ್ಕಿ ಜಮೀನು. ಸರಸ್ವತಿಪುರದಲ್ಲಿ ನನ್ನ ತಂದೆಗೆ ವಾಸದ ಮನೆ ಮತ್ತು ನಿವೇಶನ ಇವೆ. ಸರಸ್ವತಿಪುರದಲ್ಲಿರುವ ನಮ್ಮ ತಂದೆಯ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಕಂಸಾಗರದಲ್ಲಿ ನನ್ನ ತಂದೆಗೆ ಸೇರಿದ ವಾಸದ ಮನೆ ಮತ್ತು ನಿವೇಶನ ಇಲ್ಲ. ದಾವಾ ಆಸ್ತಿಗಳ ಚಕ್ಕುಬಂದಿಯನ್ನು ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.

ಕಡೂರಿನಲ್ಲಿ ನನ್ನ ಅಜ್ಜ ದಾಸಪ್ಪನಿಗೆ 4 ಮನೆಗಳು ಇದ್ದವು. ಅವುಗಳ ಪೈಕಿ 3 ಮನೆಗಳನ್ನು 1ನೇ ಪ್ರತಿವಾದಿ ಮಾರಾಟ ಮಾಡಿಕೊಂಡಿದ್ದು ಒಂದು ಮನೆ ಮಾತ್ರ ಉಳಿದಿದೆ. ನನ್ನ ತಂದೆ ಬದುಕಿದ್ದಾಗ ಜಮೀನುಗಳನ್ನು ಅಭಿವೃದ್ಧಿ ಪಡಿಸಲು ದಾವಾ ಆಸ್ತಿಗಳನ್ನು ಆಧಾರ ಮಾಡಿ 8ನೇ ಪ್ರತಿವಾದಿ ಬ್ಯಾಂಕಿನಿಂದ ಸಾಲ ಪಡೆದಿದ್ದಾರೆ ಎಂದರೆ ನಿಜ. ಆ ರೀತಿ ಪಡೆದಿದ್ದ ಸಾಲ ಇನ್ನೂ ಬಾಕಿ ಇದೆ ಎಂದರೆ ನಿಜ. ದಾವಾ ಆಸ್ತಿಗಳ ಪೈಕಿ ನನಗೆ 1/3 ಭಾಗ ಆಸ್ತಿ

ಬರಬೇಕಾಗಿಲ್ಲ  ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಖಾತೆ ನನ್ನ ತಂದೆ ಮತ್ತು ನನ್ನ ಸಹೋದರರ ಹೆಸರಿನಲ್ಲಿದೆ.

ನನ್ನ ತಂದೆ ಮರಣ ಹೊಂದಿ ಸುಮಾರು 15-16 ವರ್ಷಗಳಾಗಿವೆ. ನನ್ನ ತಾಯಿ ಮರಣ ಹೊಂದಿ ಸುಮಾರು 4 ವರ್ಷಗಳಾಗಿವೆ. ನನ್ನ ತಂದೆ ಜಮೀನುಗಳ ಮೇಲೆ ಪಡೆದಿರುವ ಸಾಲವನ್ನು ತೀರಿಸಲು ನಾನು ಬಾದ್ಯಸ್ಥಳಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.
ಕಡೂರು.